# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2801 |
| ಸದಸ್ಯರ ಹೆಸರು | : | ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 29.03.2022 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ರಾಜ್ಯದ ಎರಡನೇಯ ಅತೀ ದೊಡ್ಡ ಮಹಾನಗರ ಪಾಲಿಕೆಯಾಗಿದ್ದು, ಜನಸಂಖ್ಯೆಯು ದಿನೇ ದಿನೇ ಬೆಳೆಯುತ್ತಿದ್ದು ವಾಹನ ಸಂಚಾರ ಅಧಿಕವಾಗಿದ್ದು, ಇದಕ್ಕೆ ಪೂರಕವಾಗಿ ವಿವಿಧ ಯೋಜನೆಗಳಲ್ಲಿ ಹಲವಾರು ಕಾರ್ಯತಂತ್ರಗಳನ್ನು ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತಿದೆ.<br><br>ಸನ್ 2015-16 ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸಮಗ್ರ ಮೂಲಭೂತ ಅಭಿವೃದ್ಧಿ ಕಾರ್ಯಚಟುವಟಿಕೆಗಳಿಗಾಗಿ ರೂ. 100.00 ಕೋಟಿ ಅನುದಾನದಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 223 ಎಸ್ಎಫ್‌ಸಿ 2015 ಬೆಂಗಳೂರು ದಿನಾಂಕ: 14.06.2016 ರಡಿ "ಘನತ್ಯಾಜ್ಯ ನಿರ್ವಹಣೆಯ ಹಾಗೂ ಸಂಚಾರ ನಿಯಂತ್ರಣ ಕಾಮಗಾರಿಗಳ ಶೀರ್ಷಿಕೆಯಡಿ ಸಂಚಾರಿ ವೃತ್ತಗಳ ಅಭಿವೃದ್ಧಿ ಹಾಗೂ ಕಛೇರಿ ಕಟ್ಟಡ ನಿರ್ಮಾಣ" ಕಾಮಗಾರಿಯು ರೂ. 450.00 ಲಕ್ಷಗಳಿಗೆ ಅನುಮೋದನೆಗೊಂಡಿರುತ್ತದೆ.<br><br>ಅನುಮೋದನೆಗೊಂಡ ರೂ.450.00 ಲಕ್ಷಗಳಲ್ಲಿ ಮೂರು ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಪ್ರಾಯೋಗಿಕವಾಗಿ ಧಾರವಾಡದಲ್ಲಿ ಆಯ್ದ ವೊತ್ತದ ನವನಗರದ ಪೋಲಿಸ್ ಕಛೇರಿ ಕಟ್ಟಡದ ಮೇಲೆ ನಿರ್ಮಿಸಿದ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಲ್ಲಿ ವಿಡಿಯೋ ವಾಲ್, ವಿಡಿಯೋ ಅನಾಲಿಟಿಕ್ಸ್, ಸರ್ವರ್ ಹಾಗೂ ಇತರೆ ಅವಶ್ಯಕ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಹಾಗೂ ಪ್ರಸ್ತುತ ರೂ.450.00 ಲಕ್ಷಗಳಲ್ಲಿ ಬಾಕಿ ಉಳಿದ ಅನುದಾನ ರೂ.143.70 ಲಕ್ಷಗಳಷ್ಟಿದ್ದು, ಸನ್-2019-20 ಸಾಲಿನಿಂದ 2022-2023ನೇ ಸಾಲಿನವರೆಗೆ 4 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವ ಮಹತ್ಮಾಗಾಂಧಿ ನಗರ ವಿಕಾಸ ಯೋಜನೆಯಡಿಯ ಸಂಚಾರ ವ್ಯವಸ್ಥೆ ಸುಧಾರಣೆ ಕಾಮಗಾರಿಗಳು ಕನಿಷ್ಠ ಶೇ.5 ಲೆಕ್ಕ ಶೀರ್ಷಿಕೆಯಲ್ಲಿ ರೂ.250.08 ಲಕ್ಷಗಳಿಗೆ proposal for design, supply, Installation, Testing/Training & commissioning, maintenance, of CCTV system with Connectivity Network and Customized Video Analytics and Control Room Infrastructure for Hubballi-Dharwad Police Commissionerate on Turnkey basis. ಕಾಮಗಾರಿಗೆ ದಿನಾಂಕ: 18.03.2022 ರಂದು ಟೆಂಡರ್ ಕರೆಯಲಾಗಿರುತ್ತದೆ. |
| ಆ | ಹಾಗಿದ್ದಲ್ಲಿ, ಸದರಿ ತೊಂದರೆಯನ್ನು ನಿವಾರಣೆ ಮಾಡಲು ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ; | |

<table>
<tr>
<td>ಇ</td>
<td>ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಒಟ್ಟು ಎಷ್ಟು ಸ್ಕೈ-ವಾಕ್/ಅಂಡರ್‌ಪಾಸ್ ಮತ್ತು ಫ್ಲೈ ಓವರ್ ಗಳನ್ನು ನಿರ್ಮಾಣ ಮಾಡಲು ಅನುಮತಿ ನೀಡಲಾಗಿದೆ ಹಾಗೂ ಅನುಮತಿ ನೀಡಿರುವ ಕಾಮಗಾರಿಗಳ ಪ್ರಗತಿಯು ಯಾವ ಹಂತದಲ್ಲಿದೆ?</td>
<td>ಹುಬ್ಬಳ್ಳಿ-ಧಾರವಾಡ ಮಧ್ಯದ ಚುತುಷ್ಪಟದ ರಸ್ತೆ ಹಾಗೂ ಬಿಆರ್‌ಟಿಎಸ್ ಯೋಜನೆಗಳ ಅಡಿಯಲ್ಲಿ ಉಣಕಲ್ ಕ್ರಾಸ್, ಉಣಕಲ್ ಕೆರೆ ಮತ್ತು ನವನಗರ ಹಾಗೂ ನವಲೂರು ಹತ್ತಿರ ಮೇಲ್ಸೇತುವೆಯನ್ನು ಬಿಆರ್‌ಟಿಎಸ್ ನಿಂದ ನಿರ್ಮಿಸಲಾಗಿರುತ್ತದೆ.<br><br>ರಾಷ್ಟ್ರೀಯ ಹೆದ್ದಾರಿ ವಿಭಾಗ ಇವರಿಂದ ಕಳೆದ 5 ವರ್ಷಗಳಲ್ಲಿ ಒಟ್ಟು ಸ್ಕೈ-ವಾಕ್/ಅಂಡರ್‌ಪಾಸ್ ಮತ್ತು ಫ್ಲೈಓವರ್‌ಗಳಲ್ಲಿ ನಿರ್ಮಾಣ ವಿವರ ಈ ಕೆಳಗಿನಂತಿವೆ.
<table>
<tr><th>ಕ್ರ ಸಂ</th><th>ವರ್ಷ</th><th>ಕಾಮಗಾರಿ ಹೆಸರು</th><th>ಹಂತ</th></tr>
<tr><td>1</td><td>2016–17</td><td colspan="2" rowspan="4">ಯಾವುದು ಇರುವುದಿಲ್ಲ.</td></tr>
<tr><td>2</td><td>2017–18</td></tr>
<tr><td>3</td><td>2018–19</td></tr>
<tr><td>4</td><td>2019–20</td></tr>
<tr><td>5</td><td>2020–21</td><td>ಕೇಂದ್ರ ಭೂ ಸಾರಿಗೆ ಮಂತ್ರಾಲಯದ ವಾರ್ಷಿಕ ಯೋಜನೆಯಡಿಯಲ್ಲಿ ಹುಬ್ಬಳ್ಳಿ ಶಹರದಲ್ಲಿನ ರಾಣಿ ಚನ್ನಮ್ಮ ವೃತ್ತ ರಾಷ್ಟ್ರೀಯ ಹೆದ್ದಾರಿ 63 ಮತ್ತು 218 ಹಳೇ ರಾಷ್ಟ್ರೀಯ ಹೆದ್ದಾರಿ 04ರಲ್ಲಿ ಫ್ಲೈ ಓವರ್ ನಿರ್ಮಾಣ ಕಾಮಗಾರಿಗೆ ಅನುಮೋದನೆಯಾಗಿರುತ್ತದೆ.</td><td>ಸದರಿ ಕಾಮಗಾರಿಯಲ್ಲಿ ಒಟ್ಟು 87 ಕಾಲಂಗಳ ಪೈಕಿ ಪ್ರಸ್ತುತ 14 ಕಾಲಂಗಳ ರಾಫ್ಟ್ (ಫೌಂಡೇಶನ್) ನಿರ್ಮಾಣ ಮುಕ್ತಾಯಗೊಂಡಿದ್ದು, ಕಾಲಂಗಳಿಗೆ ಕಾಂಕ್ರೀಟ್ ಭರಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.</td></tr>
</table>
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಕಳೆದ 5 ವರ್ಷಗಳಲ್ಲಿ ಸ್ಕೈ-ವಾಕ್/ ಅಂಡರ್‌ಪಾಸ್ ಮತ್ತು ಫ್ಲೈ ಓವರ್‌ಗಳನ್ನು ನಿರ್ಮಾಣ ಮಾಡುವ ಕುರಿತು ಯಾವುದೇ ಕಾರ್ಯತಂತ್ರ ರೂಪಿಸಲಾಗಿರುವುದಿಲ್ಲ.</td>
</tr>
</table>

ಸಂಖ್ಯೆ: ನಅಇ 33 ಹೆಚ್‌ಡಿಎಂಸಿ 2022(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು